**ಷೇರು ವಹಿವಾಟು ಜೂಜಾಟವಲ್ಲ, ಅದು ವೈಜ್ಞಾನಿಕ. ಕಂಪನಿಗಳ ಸಂಪತ್ತು ವೃದ್ಧಿಸಲು ಬಹಳಷ್ಟು ಜನರು ಷೇರಿನಲ್ಲಿ ಹೂಡಿಕೆ ಮಾಡುತ್ತಾರೆ. ಅದು ಕ್ಯಾಸಿನೊದಲ್ಲಿ ಜೂಜಾಡಿದಂತಲ್ಲ. ಆದರೆ ಎಲ್ಲ ಜೂಜಿನಲ್ಲಿ ಪರ್ಮುಟೇಷನ್ ಪ್ರಾಬಬಿಲಿಟಿ ಇದ್ದಹಾಗೆ.**

ಕಾಪಾಡಿಕೊಂಡಿದ್ದ ನನ್ನ ಎಲ್ಲ ಸರ್ಟಿಫಿಕೇಟ್‌ಗಳನ್ನು ಬಹಳ ನಿರೀಕ್ಷೆಗಳನ್ನಿಟ್ಟುಕೊಂಡು ಅವನ ಬಗಲಿಗೆ ಹಾಕಿ ಕಾಯತೊಡಗಿದೆ. ಆದರೆ ಅದೃಷ್ಟ ಕೈಕೊಟ್ಟು ಇದ್ದಕ್ಕಿದ್ದ ಹಾಗೆ ನನ್ನ ದಲ್ಲಾಳಿ 'ಕಾಣದಂತೆ ಮಾಯವಾದನು'!

ಷೇರಿನ ವೃತ್ತಿಯ ಕುರಿತು ಸಮಾಜದಲ್ಲಿ ವಿಸ್ಮಯ ಮತ್ತು ವಿಚಿತ್ರ ಕುತೂಹಲವಿದೆ. ಗೌರವ–ವರ್ಚಸ್ಸು ಇಲ್ಲದ ವೃತ್ತಿಯೆಂದು ಹಾಗೂ ಈ ವೃತ್ತಿಯಲ್ಲಿ ತೊಡಗಿಸಿಕೊಂಡಿರುವವರನ್ನು ಹಣದ ಜಾದೂಗಾರರೆಂದು ತಿಳಿಯುತ್ತಾರೆ. ಇವರು ಯಾವುದೇ ರೀತಿಯ ಸೌಲಭ್ಯ, ನಿಗದಿತ ವೇತನ ಮತ್ತು ವೃತ್ತಿ ಭದ್ರತೆಯಿಲ್ಲದೆ ದಿನನಿತ್ಯ ಮಾರುಕಟ್ಟೆಯ ಏರಿಳಿತ ನಂಬಿಯೇ ಜೀವನ ನಡೆಸುವವರು. ಆದರೂ ಅವಕಾಶ ಮತ್ತು ಅದೃಷ್ಟ ಖುಲಾಯಿಸಿದರೆ ಇದು ಅಪರಿಮಿತ ಆದಾಯ ತರಬಲ್ಲ ವೃತ್ತಿ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಯಾವುದೇ ಕಂಪನಿಯ ಒಂದು ಷೇರು ಹೊಂದಿರುವವನು ಕೂಡ ಭಾಗಶಃ ಕಂಪನಿ ಒಡೆಯನೇ! ಇದನ್ನು ಯಾರೂ ಲಘುವಾಗಿ ತಿಳಿಯಬಾರದು.

'ಬಿಟ್ಟೆನೆಂದರೂ ಬಿಡದೀ ಮಾಯೆ, ಬಿಡದಿದ್ದರೆ ಬೆಂಬತ್ತಿತ್ತು ಮಾಯೆ' ಎಂಬ ಅಕ್ಕಮಹಾದೇವಿಯ ವಚನದಂತೆ, ಸುಮಾರು ವರ್ಷ ಷೇರಿನ ವಹಿವಾಟಿನಿಂದ ದೂರವಾಗಿದ್ದ ನನ್ನನ್ನು ಸ್ನೇಹಿತರು ಹಳೆಯ ಚಾಳಿಗೆ ಎಳೆದರು. ಆದರೆ ಅಂದಿನ ಪೇಪರ್ ವಹಿವಾಟಿಗೂ ಇಂದಿನ ಡಿಜಿಟಲ್ ವಹಿವಾಟಿಗೂ ಅಜಗಜಾಂತರ. ಈಗ ಎಲ್ಲವೂ ಬೆರಳ ತುದಿಯಲ್ಲೇ. ಇಂಟರ್ನೆಟ್ ಮೊಬೈಲ್ ಮೂಲಕವೇ ವಹಿವಾಟು ಮಾಡುವ ಅವಕಾಶವಿದ್ದು, ಬ್ಯಾಂಕ್ ಖಾತೆಯಲ್ಲಿ ಹಣವಿದ್ದರೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬಹುದು. ಆದರೆ ಸ್ವಲ್ಪ ಯಾಮಾರಿದರೂ ಹೂಡಿದ ಬಂಡವಾಳ ಕಳೆದುಕೊಂಡು ವೃತ್ತಿ ಜೀವನ ಹಠಾತ್ ಅಂತ್ಯವಾಗುವ ಅಪಾಯ ತಪ್ಪಿದ್ದಲ್ಲ!

ಈ ವೃತ್ತಿಯಲ್ಲಿ ಗಂಡು–ಹೆಣ್ಣು, ಯುವಕರು–ವೃದ್ಧರೆಂಬ ಭೇದವಿಲ್ಲದೆ ಎಲ್ಲ ವೃತ್ತಿಯವರು ತೊಡಗಿಸಿಕೊಳ್ಳುತ್ತಾರೆ. ಅದರಲ್ಲೂ ಮುಂಬೈ, ಗುಜರಾತ್ ಹಾಗೂ ಈಶಾನ್ಯ ಭಾರತದ ಪ್ರದೇಶದವರು ಹೆಚ್ಚು. ಕೊರೊನಾದಂಥ ಕಷ್ಟಕಾಲದಲ್ಲಿ ಎಗ್ಗಿಲ್ಲದೆ ಸಾಕಷ್ಟು ಜನರು ಹೂಡಿಕೆ ಮಾಡಲು ಡಿಮ್ಯಾಟ್ ಖಾತೆಗಳನ್ನು ತೆರೆದರು. ಇದರಲ್ಲಿ ಸುಮಾರು ಜನ ಖಾತೆ ತೆರೆದಷ್ಟೇ ಬೇಗ ಮಂಗಳ ಹಾಡಿದರು.

ಸಾಫ್ಟ್‌ವೇರ್ ಉದ್ಯೋಗಿಯಾದ ನನ್ನ ಸ್ನೇಹಿತ ವರುಣ್ ಕಂಪನಿಯಲ್ಲಿ ಒಳ್ಳೆಯ ಸಂಬಳ ಪಡೆಯುತ್ತಿದ್ದ. ಆದರೆ ಇತ್ತೀಚೆಗೆ ಷೇರು ಮಾರುಕಟ್ಟೆಯಲ್ಲಿ ಅತೀವ ಆಸಕ್ತಿ, ಕುತೂಹಲದಿಂದ ತೊಡಗಿಸಿಕೊಂಡಿರುವ ಅವನು ದಿನವೂ ಆಫೀಸಿಗೆ ತಡವಾಗಿ ಬರುವುದು ಸಾಮಾನ್ಯವಾಯಿತು. ಕಾರಣ ಕೇಳಿದರೆ – ಟ್ರಾಫಿಕ್ ಜಾಂ, ಕಾರು ಬ್ರೇಕ್ ಡೌನ್ ಎಂದು ಹೊಸ ಹೊಸ ನೆಪಗಳ ಪಟ್ಟಿ ಬೆಳೆಯುತ್ತಿತ್ತು. ಒಮ್ಮೊಮ್ಮೆ ವಹಿವಾಟು ನಡೆಸಲು ರಜೆ ತೆಗೆದುಕೊಳ್ಳುವುದೂ ಮಾಮೂಲಿಯಾಯಿತು. ಅದಕ್ಕೂ 'ನನಗೆ ಮೈ ಸರಿಯಿಲ್ಲ', 'ಹೆಂಡತಿ ಮೈ ಸರಿಯಿಲ್ಲ', 'ಮಗನಿಗೆ ಮೈ ಸರಿಯಿಲ್ಲ', 'ನೆಂಟರು ಸತ್ತರು' – ಹೀಗೆ ಎಲ್ಲ ನೆಪಗಳು ಮುಗಿದು ಬಾಸ್ ಬಳಿ ಮಂಗಳಾರತಿ, ಅರ್ಚನೆಗಳು ಆರಂಭವಾಯಿತು.

ಆದರೆ ಯಾರ ಹಂಗಿಲ್ಲದೆ ಸ್ವತಂತ್ರವಾಗಿ ತನಗೆ ಬೇಕಿದ್ದಾಗ ಕೆಲಸ ಮಾಡಬಹುದಾದ ಷೇರು ಮಾರುಕಟ್ಟೆಯ ವೃತ್ತಿ ವರುಣ್‌ನನ್ನು ತೀವ್ರವಾಗಿ ಸೆಳೆಯತೊಡಗಿತು. ಆರ್ಥಿಕ ಸ್ವಾತಂತ್ರ್ಯದ ಹಂಬಲ ಹೆಚ್ಚಾದ ಮಧ್ಯಮ ವರ್ಗದ ವರುಣ್‌ಗೆ ತನ್ನ ಹೆಂಡತಿ, ಮಗನಿಗೆ ಸಾಕಷ್ಟು ಹಣ ಮಾಡಿ ಇಡಬೇಕೆಂಬ ಗುರಿ ಪ್ರಬಲವಾದ ಕಾರಣ, ಷೇರು ವಹಿವಾಟಿನ ಆಳ ಅಧ್ಯಯನ ಆರಂಭಿಸಿದ್ದಾನೆ. ಪತ್ರಿಕೆಗಳು, ಟೀವಿ ಚಾನಲ್‌ಗಳು ಹಾಗೂ ಯೂಟ್ಯೂಬ್ ಚಾನೆಲ್‌ನಲ್ಲಿ ಹುಡುಕಾಡಿ ಹೆಚ್ಚಿನ ಮಾಹಿತಿ ಕಲೆಹಾಕತೊಡಗಿದ್ದಾನೆ.

ಸುಪ್ರಸಿದ್ಧ ತತ್ವಜ್ಞಾನಿ ಲಾವೋತ್ಸೆ ಅವರು– 'ಜಾಣ್ಮೆಯ ಕಲಿಕೆಗೆ ಮೂರು ಕ್ರಮಗಳುಂಟು. ಮೊದಲಿಗೆ ಸ್ವವಿಚಾರ; ಇದು ಅತ್ಯಂತ ಶ್ರೇಷ್ಠ. ಎರಡನೆಯ ಕ್ರಮ ಅನುಕರಣೆ; ಇದು ಅತ್ಯಂತ ಸುಲಭ. ಮೂರನೆಯ ಕ್ರಮ ಅನುಭವ; ಇದು ಅತ್ಯಂತ ಕಟು ಮತ್ತು ಕಹಿ' ಎಂದು ಹೇಳಿದ್ದಾರೆ.

ಈ ಮೇಲಿನ ಮಾತುಗಳು ಸ್ನೇಹಿತ ವರುಣ್‌ನ ಇತ್ತೀಚಿನ ನಡವಳಿಕೆಗೆ ಸಾಮ್ಯವಾಗಿರುವುದು ಕಾಕತಾಳೀಯವೇ ಸರಿ!

ಕಲಿಕೆಯ ಹಾದಿಯಲ್ಲಿ ಷೇರು ಮಾರುಕಟ್ಟೆಯ ಕುಖ್ಯಾತಿಯ ಹರ್ಷದ್ ಮೆಹ್ತಾ ಕುರಿತು ಮಾಹಿತಿ ಸಂಗ್ರಹಿಸಿದ ವರುಣ್, ಮೆಹ್ತಾನ ಬಯೋಪಿಕ್ ಸಿನಿಮಾವನ್ನು ಸಾಕಷ್ಟು ಬಾರಿ ವೀಕ್ಷಿಸಿದನು. ವಿಚಿತ್ರವೆಂಬಂತೆ ಅವನ ನಡೆ ನುಡಿಗಳಲ್ಲಿ ಹಠಾತ್ ಬದಲಾವಣೆಯಾಗಿ ಹರ್ಷದ್ ಮೆಹ್ತಾನನ್ನು ಅನುಕರಿಸತೊಡಗಿದ್ದಾನೆ. ಹೂಡಿಕೆ ಮಾಡುವ ಮುಂಚೆಯೇ ಅವನ ಮನಸ್ಸು, ಅವನು ಪ್ರಪಂಚದ ಅತ್ಯಂತ ಶ್ರೇಷ್ಠ ಷೇರುದಾರನೆಂಬಂತೆ ಪ್ರತಿಬಿಂಬಿಸುವಂತಿದೆ. ವಾಚಾಳಿಯಾಗಿದ್ದ ಅವನು ಬಿಂಕ ಮತ್ತು ಬಿಗುಮಾನ ತುಂಬಿಕೊಂಡು ಮಿತಭಾಷಿಯಾದ. ಇದು ಕೂಡ ಷೇರು ವೃತ್ತಿಯವರಿಗೆ ಇರಬೇಕಾಗಿರುವ ಗುಣವೇನೋ ಎಂದು ನಮಗೆ ಕುತೂಹಲ ಮತ್ತು ಆಶ್ಚರ್ಯವಾಯಿತು.

'ಶೋಲೆ' ಸಿನಿಮಾದ 'ಕಿತ್ ನೆ ಆದ್ಮಿ ತೇ' ಎಂಬ ಗಬ್ಬರ್ ಸಿಂಗ್ ಡೈಲಾಗ್, ರಾಜ್‌ಕುಮಾರ್ ಅವರ 'ಭಕ್ತಪ್ರಹ್ಲಾದ' ಸಿನಿಮಾದ 'ನಾನಾರು, ಕಶ್ಯಪ ಬ್ರಹ್ಮನ ಮಗ, ದಿತಿ ಗರ್ಭ ಸಂಜಾತ, ಚತುರ್ಮುಖ ಬ್ರಹ್ಮನ ಮೊಮ್ಮಗ...' ಈ ಡೈಲಾಗ್‌ಗಳನ್ನು ನಾವು ಕಂಠಪಾಠ ಮಾಡಿಕೊಂಡು ನಮ್ಮ ಪ್ರತಿಭಾ ಪ್ರದರ್ಶನ ಮಾಡುತ್ತಿದ್ದಂತೆ ವರುಣ್ ಈಗ ಮಾತು ಮಾತಿಗೂ ಹರ್ಷದ್ ಮೆಹ್ತಾನ 'ರಿಸ್ಕ್ ಹೈ ತೋ ಇಶ್ಕ್ ಹೈ' ಡೈಲಾಗ್ ಹೇಳುತ್ತಿರುತ್ತಾನೆ. ನಿಜವಾಗಿ ಹರ್ಷದ್ ಮೆಹ್ತಾ ಹಾಗೆ ಹೇಳುತ್ತಿದ್ದನೋ ಇಲ್ಲವೋ? ಸಿನಿಮಾ ವೀಕ್ಷಿಸಿದ ನಂತರ ಮೆಹ್ತಾನ ದೇಹ ವರುಣ್ ದೇಹ ಹೊಕ್ಕಂತೆ ಹಾವಭಾವ ಮಾತುಕತೆಗಳಲ್ಲಿ ಎದ್ದುಕಾಣುತ್ತಿರುವುದು ನಮ್ಮಲ್ಲಿ ಆಶ್ಚರ್ಯ ಮೂಡಿಸತೊಡಗಿದೆ. ಹರ್ಷದ್ ಮೆಹ್ತಾ ಸಾಯುವ ವೇಳೆಗೆ ವರುಣ್ ಇನ್ನೂ ಶಾಲಾ ಬಾಲಕ!

ಜನರ ಹುಡುಕಾಟದ ನಾಡಿ ಹಿಡಿಯುವ ಮಾರುಕಟ್ಟೆಯಲ್ಲಿ ನಾ ಮುಂದು ತಾ ಮುಂದು ಎಂದು ಹುಟ್ಟಿಕೊಳ್ಳುವ ಮಾರುಕಟ್ಟೆ ತಜ್ಞರಿಗೇನೂ ಈಗ ಕೊರತೆಯಿಲ್ಲ. ಎಲ್ಲೆಡೆ ನಾಯಿಕೊಡೆಗಳಂತೆ ತಲೆಚಾಚುವ ಸಂಸ್ಥೆಗಳನ್ನು ಎಲ್ಲ ಕ್ಷೇತ್ರಗಳಲ್ಲೂ ಕಾಣಬಹುದು. ಆ ವರ್ಗಕ್ಕೆ ಷೇರು ಮಾರುಕಟ್ಟೆಯ ವೃತ್ತಿಯಲ್ಲಿ ಸಾಕಷ್ಟು ತರಬೇತುದಾರರು ಹುಟ್ಟಿಕೊಂಡಿದ್ದಾರೆ.

ನಿಜ ಹೇಳಬೇಕೆಂದರೆ ವಹಿವಾಟಿಗಿಂತ ತರಬೇತಿ ನೀಡುವುದರಲ್ಲೇ ಅವರು ಕೋಟಿಗಟ್ಟಲೆ ಸಂಪಾದನೆ ಮಾಡುತ್ತಿರುವುದು ಗಮನಾರ್ಹ. ಷೇರು ಮೌಲ್ಯ ಬೇಡಿಕೆ ಮತ್ತು ಪೂರೈಕೆಯನ್ನು ಆಧರಿಸಿದೆ. ಕಂಪನಿಯ ಮೂಲಭೂತ ಗುಣ ಮತ್ತು ಕಂಪನಿಯ ಪೂರ್ವ ಇತಿಹಾಸ ಅರಿತ ಯಾರಾದರೂ ಯಾವುದೇ ನಷ್ಟವಿಲ್ಲದೆ ವಹಿವಾಟು ನಡೆಸಬಹುದು. ಆದರೆ, ಮಾರುಕಟ್ಟೆ ಪಂಡಿತರು ತಾಂತ್ರಿಕ ರೇಖಾಚಿತ್ರಗಳು, ರೋಚಕ ವರ್ಣನೆಗಳ ಮೂಲಕ ಗ್ರಾಹಕರಲ್ಲಿ ಗೊಂದಲ ಹುಟ್ಟಿಸಿ ಅದನ್ನು ಸಂಕೀರ್ಣಗೊಳಿಸುತ್ತಾರೆ. ಮೂಲಾಧಾರ ವಿಶ್ಲೇಷಣೆ, ತಾಂತ್ರಿಕ ವಿಶ್ಲೇಷಣೆಗಳ